ಹೋಗುತ್ತಿದೆ. ಅದನ್ನು ಟ್ಯಾಪ್ ಮಾಡಬೇಕು. ಆದರೆ we have to invest more money. Even if we invest more funds, we are going to benefit through the pernial source of water which is just running undergroued. ಆದ್ದರಿಂದ ದಯವಿಟ್ಟು ಈ ಬಗ್ಗೆ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ. ಅಧ್ಯಕ್ಷರೇ, ಇದಕ್ಕೇ ನಾನು ಹೇಳಿದೆ, ಆರ್ಮುಗಂ ಕಮಿಟಿ ವರದಿಯಲ್ಲಿ ಯಾವ ಯಾವ ಸಲಹೆಗಳು ಇವೆ ಅವುಗಳ ಬಗ್ಗೆ ಹೈ ಪವರ್ ಕಮಿಟಿ ಮಾತಿ ಅವುಗಳನ್ನು ಕಾರ್ಯರೂಪಕ್ಕೆ ತರುವುದರ ಬಗ್ಗೆ ಶಾಶ್ವತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ ಎಂದು. ಆ ಬಗ್ಗೆ ನನ್ನಲ್ಲಿ ವಿವರ ಇದೆ. ಈ ಒಂದು ಅಂಡರ್‌ಗ್ರೌಂಡ್ ವಾಟರ್ ಬಗ್ಗೆಯೇ ಹಿಂದೆ ಹೈದರಾಬಾದ್ ಕರ್ನಾಟಕದಲ್ಲಿ ಒಂದು ವೆಲ್ ಸಿಂಕಿಂಗ್ ಇಲಾಖೆ ಇತ್ತು. ಆ ಇಲಾಖೆಯು ಕೆಲಸವೆಂದರೆ ನೀರು ಎಲ್ಲಿ ಸಿಗುತ್ತದೋ ಅಲ್ಲಿ ನೋಡಿ ಒಂದು ಬಾವಿ ಹೋಡೆದು ಬಿಡುವುದು. ಮಾನ್ಯ ಸದಸ್ಯರು ಈ ಬಗ್ಗೆ ಏನು ಸಲಹೆ ಕೊಟ್ಟಿದ್ದಾರೆ ಇದು ಒಳ್ಳೆಯದಿದೆ. ಈ ವಿಷಯವನ್ನು ಹೈ ಪವರ್ ಕಮಿಟಿಗೆ ಒಪ್ಪಿಸೋಣ ಅದು ತ್ವರಿತಗತಿಯಲ್ಲಿ ರಿಪೋರ್ಟ್ ಕೊಟ್ಟರೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡೋಣ. ಈ ಬಾವಿ ತೋಡುವುದು, ಕೆರೆ ಕಟ್ಟುವುದು ಎಂದು ಕುಳಿತರೆ ಬಹಳ ದಿವಸಗಳಾಗುತ್ತವೆ. ಈಗಿನ ಪರಿಸ್ಥಿತಿಗೆ ಏನು ತಕ್ಷಣ ಪರಿಹಾರಗಳನ್ನು ಕೊಡುವುದಕ್ಕಾಗುತ್ತದೆ ಎಂದರೆ ಆಹಾರ ಧಾನ್ಯಗಳನ್ನು ಒದಗಿಸುವುದು. ಅವರಿಗೆ ಕೆಲಸಕಾಯ್ಗಳನ್ನು ಒದಗಿಸುವುದು ಈ ಬಗ್ಗೆ ಗಮನ ಕೊಡಬೇಕಾಗುತ್ತದೆ. ಹಾಗೂ ಮಾನ್ಯ ಮಸಿಯಪ್ಪನವರು ಹಿಂದೆ ತಾಲ್ಲೂಕು ವೈಸ್ ಆಹಾರ ಧಾನ್ಯಗಳನ್ನು ಒದಗಿಸುತ್ತಿದ್ದಾಗ ಆ ಬಗ್ಗೆ ವಿವರಗಳ ಒಂದು ಪ್ರತಿಯನ್ನು ಆಯಾ ತಾಲ್ಲೂಕಿನ ವಿಧಾನಸಭಾ ಸದಸ್ಯರಿಗೆ ಒದಗಿಸಲಾಗುತ್ತಿತ್ತು, ಆ ಪದ್ಧತಿ ಈಗ ಇಲ್ಲ ಎಂದು ಹೇಳಿದರು ಈ ಒಂದು ವ್ಯವಸ್ಥೆಯನ್ನು ನಾವು ಇನ್ನು ಮುಂದೂ ಕೂಡಾ ಮುಂದುವರಿಸುತ್ತೇವೆಂದು ನಾನು ಹೇಳುತ್ತೇನೆ. ಇನ್ನು ಮಾನ್ಯ ಬಸವರಾಜ್ ಪಾಟೀಲ್ ಅವರು ಪ್ರಸ್ತಾಪ ಮಾಡಿ ಮಾರ್ಕೆಟ್‌ನಲ್ಲಿ ದೊರೆಯತಕ್ಕ ಜೋಳ ಹಾಗೂ ಸರ್ಕಾರ ಒದಗಿಸತಕ್ಕ ಜೋಳದಲ್ಲಿ ಬೆಲೆ ವ್ಯತ್ಯಾಸ ಇದ್ದು ಸರ್ಕಾರದವರು ಕೊಡತಕ್ಕ ಜೋಳದ ಬೆಲೆ ಜಾಸ್ತಿ ಇರುತ್ತದೆಂದು ಹೇಳಿದರು. ಎಂದಮೇಲೆ ಆ ಭಾಗದಲ್ಲಿ ಮಾರ್ಕೆಟ್‌ನಲ್ಲಿ ದೊರೆಯುತಕ್ಕ ಜೋಳ ಕಡಿಮೆ ದರದಲ್ಲಿ ಸಿಗುತ್ತದೆಂದರೆ ಅಲ್ಲಿ ಬರಗಾಲ ಇಲ್ಲ ಎಂದಂತಾಯಿತು. ನಾವು ಯಾವ ರೇಟಿಗೆ ಕೊಂಡು ಕೊಂಡಿರುತ್ತೇವೆಯೋ ಅದಕ್ಕೆ ಸಾಗಣಿಕೆ ವೆಚ್ಚ ಮಾತ್ರ ಸೇರಿಸಿ ಮಾರಾಟ ಮಾಡುತ್ತೇವೆ. ಆದರೆ ಇದಕ್ಕಿಂತಲೂ ಕಡಿಮೆ ದರದಲ್ಲಿ ಸಿಗುತ್ತದೆಂದು ಅವರು ಹೇಳಿದ್ದಾರೆ. ಹಾಗೂ ನಾನು ಮೊದಲೇ ಹೇಳಿದೆ, ನಾವು ರಾಗಿಯಾಗಲೀ, ಜೋಳವಾಗಲೀ ಪ್ರಕ್ಯೂರ್ ಮಾಡಿಲ್ಲ. ಅನೇಕ ಕಡೆ ಬರಗಾಲ ಬಂದಿದ್ದರಿಂದ ಇದನ್ನು ಪ್ರಕ್ಯೂರ್ ಮಾಡಲಾಗಲಿಲ್ಲ. ಈಗ ನಮ್ಮಲ್ಲಿ ಜಾಸ್ತಿ ಸ್ಟಾಕ್ ಇರತಕ್ಕದ್ದು ಬರೀ ಅಕ್ಕಿ ಮಾತ್ರ. ಇದನ್ನು ಎಷ್ಟು ಬೇಕೋ ಅಷ್ಟು ಕೊಡುವುದಕ್ಕೆ ಸಾಧ್ಯವಿದೆ. ಹಾಗೂ ಇನ್ನು ಕೆಲವು ಕಡೆ ಇ.ಎ.ಎಸ್. ನಲ್ಲಿ ಕೆಲಸಅರ್ಧಕ್ಕೆ ನಿಂತುಹೋಗಿದೆ ಯೆಂದಿದ್ದಾರೆ. ಎಲ್ಲಿ ಬರಗಾಲ ಪರಿಸ್ಥಿತಿ ಇದೆ ಅಲ್ಲಿ ಇ.ಎ.ಎಸ್. ಸ್ಕೀಮ್ ಕಂಟಿನ್ಯೂ ಮಾಡುವುದಕ್ಕೆ ನಾವು ಆರ್ಡರ್ ಇಷ್ಯೂ ಮಾಡುತ್ತೇವೆ. ಹಾಗೂ ಎಲ್ಲಿ ಅರ್ಧಕ್ಕೆ ಕೆಲಸ ನಿಂತಿದೆ ಅವನ್ನು ಕಂಪ್ಲೀಟ್ ಮಾಡುವುದಕ್ಕೆ ಪ್ರಾತಿನಿಧ್ಯ ಕೊಡುತ್ತೇವೆಂದು ಹೇಳಿದ್ದೇನೆ. ಹಾಗೂ ಮಾನ್ಯ ಸದಸ್ಯರು ಮೈಸೂರಿಗೆ ಹೆಚ್ಚು ಹಣ ಕೊಟ್ಟಿಲ್ಲವೆಂದರು ನಾವು ೧ನೇ ಏಪ್ರಿಲ್‌ನಿಂದ, ಜುಲೈ ೨೪ರವರೆಗೆ ಸುಮಾರು ೪೮ ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದ್ದೇವೆ. ಆದರಲ್ಲಿ ಖರ್ಚು ಆಗಿರುವುದು ಕೇವಲ ೧೭ ಲಕ್ಷ ರೂಪಾಯಿ ಮಾತ್ರ. ಬಳ್ಳಾರಿ ಜಿಲ್ಲೆಗೆ ಕೂಡ ೭೭ ಲಕ್ಷದ ೬೭ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ಅವರು ಖರ್ಚು ಮಾಡಿರುವುದು ೫೩ ಸಾವಿರ ರೂಪಾಯಿ, ಜುಲೈ ೧೮ರವರೆಗೆ ನಾವು ಹಣ ಕೊಟ್ಟಿದ್ದೇವೆ ಏನಾದರೂ ತೊಂದರೆ ಇದ್ದರೆ ನೀವು ಗಮನಕ್ಕೆ ತಂದರೆ ನಾನು ಸಾಧ್ಯವಾದ ಮಟ್ಟಿಗೆ ಬೇಗನೆ ಪರಿಹಾರ ಕೊಟ್ಟು ಏನು ಕೆಲಸ ಮಾಡಿಸಬೇಕೋ ಅದನ್ನು ಮಾಡಿಸೋಣ.